## ವಿದೇಶಗಳಲ್ಲೂ ಜನಪ್ರಿಯ

ಬ್ಯಾಟ್‌ವಿಂಗ್ ಟಾಪ್‌ಗಳು ವಿದೇಶಗಳಲ್ಲೂ ಜನಪ್ರಿಯತೆ ಪಡೆದಿದೆ. ಹಾಗೆ ನೋಡಿದರೆ ಇದರ ಮೂಲ ಅರಬ್ ದೇಶಗಳು ಎನ್ನುತ್ತವೆ ಫ್ಯಾಷನ್ ಲೋಕದ ಮೂಲಗಳು. ಈಗಲೂ ಅರಬ್ ದೇಶಗಳಲ್ಲಿ ಈ ಟಾಪ್‌ಗಳು ಹೆಚ್ಚು ಪ್ರಚಲಿತದಲ್ಲಿವೆ. ಈ ರೀತಿಯ ಟಾಪ್ ಧರಿಸಿದಾಗ ಹೊಳೆಯುವ ಮಣಿಮಾಲೆ, ಟ್ರೈಬಲ್ ನೆಕ್ಲೇಸ್‌ಗಳು ಹೆಚ್ಚು ಚೆನ್ನಾಗಿ ಒಪ್ಪುತ್ತದೆ.

ಬ್ಯಾಟ್ ವಿಂಗ್ ಟಾಪ್‌ಗಳಲ್ಲಿಯೂ ಹಲವು ವಿಧ. ಲಾಂಗ್ ಬ್ಯಾಟ್‌ವಿಂಗ್ ಪ್ಯಾಂಟ್, ತ್ರಿಫೋರ್ತ್ ಟಾಪ್, ಶಾರ್ಟ್ ಟಾಪ್‌ಗಳು ವಿಭಿನ್ನ ವಿನ್ಯಾಸ, ಆಕಾರ, ಶೈಲಿ, ಬಣ್ಣಗಳಲ್ಲಿ ಲಭ್ಯ. ಉದ್ದವಿರುವ ಯುವತಿಯರು ಲಾಂಗ್ ಪ್ಯಾಂಟ್ ಜೊತೆಗೆ ಧರಿಸಬಹುದು. ಗಿಡ್ಡ ಇರುವ ಹುಡುಗಿಯರು ಕೂಡ ಲಾಂಗ್ ಲೆಂತ್ ಪ್ಯಾಂಟ್‌ಗಳನ್ನು ಆಯ್ಕೆ ಮಾಡಿಕೊಳ್ಳಬಹುದು.

ಪ್ರಿಂಟೆಡ್ ಟಾಪ್‌ಗಳೂ ಜೀನ್ಸ್ ಪ್ಯಾಂಟ್ ಮೇಲೆ ಧರಿಸಿದರೆ ಸಖತ್ ಲುಕ್ ಕೊಡುತ್ತದೆ. ಪ್ರಿಂಟೆಡ್‌ನಲ್ಲಿಯೂ ಅನಿಮಲ್, ಫ್ಲೋರಲ್, ಸೀಕ್ವನ್ಸ್, ಕ್ಯಾಮೊ ಪ್ರಿಂಟ್ಸ್‌ನ ಬ್ಯಾಟ್ ವಿಂಗ್ ಟಾಪ್‌ಗಳು ಇಂದು ಹೆಚ್ಚು ಪ್ರಚಲಿತದಲ್ಲಿದ್ದು, ಧರಿಸಿಕೊಳ್ಳಲು ಆರಾಮದಾಯಕವೆನಿಸಿವೆ. ಗಾಢವರ್ಣದ ಮೇಲೆ ಹೂವುಗಳ ವಿನ್ಯಾಸ ಎದ್ದುಕಾಣುವಂತಿವೆ. ಮಕ್ಕಳು ಧರಿಸುವುದಾದರೆ ಜಿಂಕೆ, ಚಿರತೆ ಮುಂತಾದ ಡಾಟೆಡ್ ಪ್ರಾಣಿಗಳ ವಿನ್ಯಾಸದ ಬ್ಯಾಟ್‌ವಿಂಗ್ ಟಾಪ್ ತುಂಬ ಚೆನ್ನಾಗಿ ಕಾಣುತ್ತದೆ. ಫ್ಲೋರಲ್, ಜಾಮೆಟ್ರಿಕಲ್ ವಿನ್ಯಾಸದ ಟಾಪ್‌ಗಳು ಎಂದಿಗೂ ಟ್ರೆಂಡಿಯಾಗಿಯೇ ಇರುತ್ತವೆ.

ಪ್ಲೇನ್ ಬ್ಯಾಟ್‌ವಿಂಗ್, ಸೆಲೆಬ್ರಿಟಿ ಚಾಯ್ಸ್, ಪ್ಲಸ್ ಸೈಜ್ ಬ್ಯಾಟ್‌ವಿಂಗ್, ಬರ್ಡ್ಸ್ ಪ್ರಿಂಟೆಡ್ ಬ್ಯಾಟ್‌ವಿಂಗ್... ಹೀಗೆ ಹಲವು ವೈವಿಧ್ಯಗಳಿವೆ.

‘ಪ್ಲೇನ್ ಬ್ಯಾಟ್‌ವಿಂಗ್ ಟಾಪ್‌ನಲ್ಲಿ ಹೆಚ್ಚಿನ ಯಾವುದೇ ಚಿತ್ತಾರವಿರದೆ ಸಾದಾ ಟಾಪ್‌ಗಳಿವು. ಆದರೆ ಎಲಿಗೆಂಟ್ ಲುಕ್ ಕೊಡುವುದರಲ್ಲಿ ಸಂಶಯವೇ ಇಲ್ಲ. ಹದಿಹರೆಯದ ಹುಡುಗಿಯರಿಗೆ ಈ ರೀತಿಯ ಟಾಪ್‌ಗಳು ಹೆಚ್ಚು ಸೂಕ್ತ’ ಎನ್ನುತ್ತಾರೆ ಬೆಂಗಳೂರಿನ ಜೆ.ಪಿ. ನಗರದಲ್ಲಿರುವ ಫ್ಯಾಷನ್ ತಜ್ಞೆ ಫರೀದಾ ಸುಲ್ತಾನ್.

ಸೆಲೆಬ್ರಿಟಿ ಚಾಯ್ಸ್ ಟಾಪ್ ಪ್ರಕಾರದ ಟಾಪ್‌ಗಳನ್ನು ಬಾಲಿವುಡ್ ಬೆಡಗಿಯರು ಬಳಸುವುದು ಹೆಚ್ಚು. ನಟಿ ವಿದ್ಯಾ ಬಾಲನ್ ಈ ಶೈಲಿಯ ಟಾಪ್‌ಪ್ರಿಯೆ. ಈಗೀಗ ಸ್ಯಾಂಡಲ್‌ವುಡ್‌ನ ಕನ್ನೆಯರೂ ಈ ರೀತಿಯ ಟಾಪ್‌ಗಳಿಗೆ ಮಾರುಹೋಗಿದ್ದಾರೆ.

ಪ್ಲಸ್ ಸೈಜ್ ಟಾಪ್‌ಗಳು ಕಚೇರಿ ಕೆಲಸಕ್ಕೆ ತೆರಳುವ ಮಹಿಳೆಯರಿಗೆ ಹೇಳಿಮಾಡಿಸಿದಂಥವು. ಮದುವೆಯಾಗಿ ಮಕ್ಕಳಾದ ಬಳಿಕ ದೇಹದ ಆಕಾರ ನಿಯಂತ್ರಣಕ್ಕೂ ಮೀರಿರುವ ಸಂದರ್ಭದಲ್ಲಿ ಇಂಥ ಟಾಪ್‌ಗಳು ‘ಯಂಗ್‌ಲುಕ್’ ಕೊಡುತ್ತವೆ. ಫ್ಯಾಷನ್ ಕಂಫರ್ಟ್ ಎರಡಕ್ಕೂ ಸೂಕ್ತವೆನಿಸುವುದರಿಂದ ಇದು ಮಹಿಳೆಯರ ಮೆಚ್ಚು ಆಗಿದೆ.

‘ಬ್ಯಾಟ್‌ವಿಂಗ್ ಟಾಪ್ ಧರಿಸುವುದರಿಂದ ಮಹಿಳೆಯರಿಗೆ ಆಗುವ ಲಾಭಗಳ ಬಗ್ಗೆ ಗಮನಹರಿಸಿದರೆ ಈ ಟಾಪ್‌ಗಳಿಂದ ದೇಹದ ಫಿಟಿಂಗ್ ಗೊತ್ತಾಗುವುದೇ ಇಲ್ಲ. ಸ್ವತಂತ್ರವಾಗಿ ಧರಿಸಿಕೊಳ್ಳಬಹುದು, ಪಿಕ್‌ನಿಕ್ ಪಾರ್ಟಿಗಳಿಗೆ ಹೋಗುವಾಗ ‘ರಿಚ್ ಲುಕ್’ ಅನ್ನೂ ಕೊಡುತ್ತದೆ. ಚಳಿಗಾಲಕ್ಕೆ ಅತ್ಯಂತ ಸೂಕ್ತವೆನಿಸುತ್ತವೆ. ಬರೀ ಪ್ಯಾಂಟ್ ಅಷ್ಟೇ ಅಲ್ಲದೆ ಸ್ಕರ್ಟ್, ಲಾಂಗ್ ಸ್ಕರ್ಟ್‌ಗಳ ಮೇಲೂ ಈ ಟಾಪ್ ಚೆನ್ನಾಗಿ ಕಾಣುತ್ತದೆ’ ಎಂದು ಪಟ್ಟಿ ಮಾಡುತ್ತಾರೆ ಫರೀದಾ.

